ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :

ಅ) ಬಂದಿದೆ.

ಆ) 1994-95ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಏಳಿಗೆಗಾಗಿ ಮೀಸಲಿಟ್ಟ ರೂ.10,000 ಅನುದಾನದಲ್ಲಿ ತಂಬಿಗೆ, ಲೋಟ, ಹಾಗೂ ತಾಟುಗಳುಳ್ಳ 100 ಸೆಟ್ಟುಗಳನ್ನು ಹೆಚ್ಚಿನ ಬೆಲೆಗೆ ಖರೀದಿಸಿದ್ದು ಆ ಪೈಕಿ 96-97ನೇ ಆರ್ಥಿಕ ವರ್ಷ ಬಂದರೂ 26 ಸೆಟ್ಟುಗಳನ್ನು ಹಂಚಿರುವುದಿಲ್ಲವೆಂದು ಗ್ರಾಮಸ್ಥರ ಪರವಾಗಿ ಶ್ರೀ ಪಿ.ಹೆಚ್. ಪಾಟೀಲ್ ಎಂಬುವವರು ಆಪಾದಿಸಿದ್ದಾರೆ. ಈ ವಿಷಯ ದಿನಾಂಕ 18-6-96ರಂದು ನಡೆದ ಗ್ರಾಮ ಸಭೆಯಲ್ಲಿ ಚರ್ಚೆಗೆ ಬಂದಿರುತ್ತದೆ. ನಂತರ ಇನ್ನುಳಿದ 26 ಸೆಟ್ಟುಗಳು ಮೇದೂರು ಗ್ರಾಮದ ಪ.ಜಾತಿ/ಪ.ಪಂಗಡದ ಫಲಾನುಭವಿಗಳು ತಿರಸ್ಕರಿಸಿದ್ದರಿಂದ ವಿತರಣೆ ಆಗದೆ ಬಾಕಿ ಉಳಿದಿದೆ ಎಂಬ ವಿಷಯವನ್ನು ಸಭೆಯ ಗಮನಕ್ಕೆ ತಂದಾಗ ಶ್ರೀ ಕೆ. ಹೆಚ್. ಪಾಟೀಲರು ವೈಯಕ್ತಿಕ ಉದ್ದೇಶದಿಂದ ಗ್ರಾಮ ಸಭೆಯಲ್ಲಿ ಆಪಾದನೆ ಮಾಡಿದ್ದಾರೆ ಹಾಗೂ ಸದರಿ ವ್ಯವಹಾರದಲ್ಲಿ ಯಾವುದೇ ದೋಷವಿರುವುದಿಲ್ಲವೆಂದು ತೀರ್ಮಾನಿಸಲಾಗಿದೆ.

ಇ) ಹಿರೇಕೇರೂರು ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿಗಳು, ಕಾರ್ಯಾಲಯದ ಗ್ರಾಮ ಪಂಚಾಯಿತಿ ವಿಸ್ತರಣಾಧಿಕಾರಿಯನ್ನು ದಿ:9-2-96ರಂದು ಸ್ಥಾನಿಕ ಚೌಕಾಸಿಗಾಗಿ ನಿಯೋಜಿಸಿ ಸದರಿ ವಿಷಯದ ಬಗ್ಗೆ ವರದಿಯನ್ನು ಪಡೆದಿದ್ದಾರೆ.

ಈ) ಈ ಪ್ರಕರಣದಲ್ಲಿ ಯಾವುದೇ ಹಣ ದುರುಪಯೋಗವಾಗಿರುವುದು ಕಂಡು ಬರುವುದಿಲ್ಲ. ಉಳಿದ 26 ಜನರಿಗೆ ಸಾಮಗ್ರಿಗಳನ್ನು ದಿನಾಂಕ 8-3-97ರಂದು ವಿತರಿಸಲಾಗಿದೆ. ಈ ವ್ಯವಹಾರದಲ್ಲಿ ಕಮಿಟಿಯ ತೀರ್ಮಾನದಂತೆ ಕ್ರಮ ತೆಗೆದುಕೊಳ್ಳಲಾಗಿದೆ. ಕರ್ತವ್ಯ ಲೋಪವಾಗಿರುವುದು ತಿಳಿದು ಬರುವುದಿಲ್ಲ. ಆದುದರಿಂದ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ನಿರ್ಮಲ ಕರ್ನಾಟಕ ಯೋಜನೆಯಲ್ಲಿ ಖರ್ಚಾದ ಹಣ

780 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರ್) : ಮಾನ್ಯ ಗ್ರಾಮೀಣಭಿವೃದ್ಧಿ ಪಂಚಾಯತ್ ರಾಜ್‌ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಅಕ್ಟೋಬರ್‌95ರಿಂದ ಅಕ್ಟೋಬರ್‌96ರವರೆಗೆ ನಿರ್ಮಲ ಕರ್ನಾಟಕ ಯೋಜನೆಯಲ್ಲಿ ಜಿಲ್ಲಾವಾರು ನಿಗದಿಪಡಿಸಿದ ಆರ್ಥಿಕ ಹಾಗೂ ಭೌತಿಕ ಗುರಿ ಎಷ್ಟು?

2) ಆ ಅವಧಿಯಲ್ಲಿ ಜಿಲ್ಲಾವಾರು ಬಿಡುಗಡೆ ಆದ ಹಾಗೂ ಖರ್ಚಾದ ಹಣ ಎಷ್ಟು? ಸಾಧಿಸಿದ ಭೌತಿಕ ಪ್ರಗತಿ ಎಷ್ಟು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಭಿವೃದ್ಧಿ ಮತ್ತು ಪಂಚಾಯತ್ ರಾಜ್‌ಸಚಿವರು) :

1)ಮತ್ತು2) ಉತ್ತರವನ್ನು ಅನುಬಂಧ - 1ರಲ್ಲಿ ನೀಡಲಾಗಿದೆ.

ಅನುಬಂಧ-1 / Annexure -1

ನಿರ್ಮಲ ಕರ್ನಾಟಕದಡಿಯಲ್ಲಿ ದಿ: 2.10.95ರಿಂದ 31.10.96ರವರೆಗಿನ ಭೌತಿಕ ಮತ್ತು ಆರ್ಥಿಕ ಗುರಿ

ಕ್ರಮ ಸಂಖ್ಯೆ	ಜಿಲ್ಲೆ	ಆರ್ಥಿಕ ಗುರಿ ಅಕ್ಟೋಬರ್ 95 ರಿಂದ ಅಕ್ಟೋಬರ್ 96 (ರೂ. ಲಕ್ಷಗಳಲ್ಲಿ)	ಭೌತಿಕ ಗುರಿ ಅಕ್ಟೋಬರ್ 95 ರಿಂದ ಅಕ್ಟೋಬರ್ 96 (ಸಂಖ್ಯೆ)	ಅಕ್ಟೋಬರ್ 95 ರಿಂದ ಅಕ್ಟೋಬರ್ 96 ರೊಳಗೆ ಬಿಡುಗಡೆ ಆದ ಅನುದಾನ (ರೂ. ಲಕ್ಷಗಳಲ್ಲಿ)	ಅಕ್ಟೋಬರ್ 95 ರಿಂದ ಅಕ್ಟೋಬರ್ 96 ರವರೆಗೆ ಖರ್ಚಾದ ಹಣ (ರೂ. ಲಕ್ಷಗಳಲ್ಲಿ)	ಅಕ್ಟೋಬರ್ 95 ರಿಂದ ಅಕ್ಟೋಬರ್ 96 ರವರೆಗೆ ಸಾಧಿಸಿದ ಭೌತಿಕ ಪ್ರಗತಿ (ಸಂಖ್ಯೆ)
1	2	3	4	5	6	7
1.	ಬೆಂಗಳೂರು (ನಗರ)	332.10	22,600	160.35	136.95	7,490
2.	ಬೆಂಗಳೂರು (ಗ್ರಾಂ)	171.00	11,600	84.45	28.10	6,626
3.	ಬೆಳಗಾಂ	695.70	47,300	273.66	203.70	20,603
4.	ಬಳ್ಳಾರಿ	324.00	22,000	230.71	188.28	15,547
5.	ಬೀದರ್	259.20	17,600	62.70	31.26	3,121
6.	ಬಿಜಾಪುರ	533.70	36,200	188.09	159.34	10,343
7.	ಚಿಕ್ಕಮಗಳೂರು	331.20	22,500	198.46	166.48	10,473
8.	ಚಿತ್ರದುರ್ಗ	405.00	27,500	219.99	140.33	9,199
9.	ದಕ್ಷಿಣ ಕನ್ನಡ	521.10	35,400	519.46	262.03	30,272

1	2	3	4	5	6	7
10.	ಧಾರವಾಡ	645.20	43,000	205.51	139.07	10,213
11.	ಗುಲ್ಬರ್ಗಾ	494.10	33,000	169.32	93.73	11,459
12.	ಹಾಸನ	377.10	25,600	181.86	156.00	12,302
13.	ಕೊಡಗು	142.20	9,600	50.33	33.49	1,785
14.	ಕೋಲಾರ	448.20	30,500	135.73	76.57	3,552
15.	ಮಂಡ್ಯ	335.70	22,800	165.05	107.82	9,292
16.	ಮೈಸೂರು	531.00	36,100	296.62	188.00	18,668
17.	ರಾಯಚೂರು	440.10	29,900	185.52	79.33	7,064
18.	ಶಿವಮೊಗ್ಗ	535.50	36,400	466.34	211.63	25,749
19.	ತುಮಕೂರು	470.70	32,000	154.35	138.00	7,328
20.	ಉತ್ತರ ಕನ್ನಡ	307.80	20,900	127.90	110.63	5,572
	ಮೊತ್ತ	**8300.70**	**5,64,100**	**4076.40**	**2650.74**	**2,27,358**